ಗಮನ ಸೆಳೆಯುವ ಸೂಚನೆಗಳು.

1)ಬೆಳಗಾಂ ಜಿಲ್ಲೆಯಲ್ಲಿ ಮಲಪ್ರಭಾ, ಕಾಡಾ ಸಿಬ್ಬಂದಿ ವೆಚ್ಚವು ಅಭಿವೃದ್ಧಿ ಕೆಲಸಗಳಿಗಿಂತಲೂ ಹೆಚ್ಚಾಗಿದ್ದು ಅದರ ಕೆಲಸಗಳು ನಿಧಾನವಾಗಿ ಸಾಗಿರುವುದು.

ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಅಧ್ಯಕ್ಷರೆ, ಬೆಳಗಾಂ ಜಿಲ್ಲೆಯಲ್ಲಿ ಮಲಪ್ರಭಾ ಕಾಡಾ ಅವರ ಸಿಬ್ಬಂದಿ ವೆಚ್ಚವು ಅಭಿವೃದ್ಧಿ ಕೆಲಸಗಳಿಗಿಂತಲೂ ಹೆಚ್ಚಾಗಿದ್ದು ಕಾಡಾ ಕೆಲಸಗಳು ನಿಧಾನವಾಗಿ ಸಾಗಿರುವ ಬಗ್ಗೆ ಮಾನ್ಯ ಆಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು ಗಮನವನ್ನು ಸೆಳೆಯುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಆಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯಸಚಿವರ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ಮಾಡುತ್ತೇನೆ.

1993-94ನೇ ಸಾಲಿಗೆ ಮಲಪ್ರಭ ಮತ್ತು ಘಟಪ್ರಭಾ ಕಾಡಾಕ್ಕೆ ಒಟ್ಟು 1315.35 ಲಕ್ಷ ರೂ.ಗಳು ಅನುದಾನವಿತ್ತು. ಕೃಷ್ಣಾ ಮೇಲ್ದಂಡೆ ಕಾಮಗಾರಿಗಳಿಗಾಗಿ ಹಾಗೂ ವಿಶೇಷ ಘಟಕ ಯೋಜನೆಯಿಂದ ಪೂಲಿಂಗ್ಗಾಗಿ ಹಣ ಪರಿಷ್ಕೃತಗೊಂಡ ಮೇಲೆ ಸದರಿ ಕಾಡಾಕ್ಕೆ 536.84 ಲಕ್ಷ ರೂಪಾಯಿಗಳು ಅನುದಾನವಾಗಿ ದೊರೆತಿದ್ದು ಕಾಡಾದಲ್ಲಿ ಆಳವಡಿಸಲಾದ ಎಲ್ಲಾ ಕಾರ್ಯಕ್ರಮಗಳನ್ನು ಸೂಕ್ತವಾಗಿ ಪರಿಷ್ಕರಿಸಲಾಯ್ತು. ಅವುಗಳಲ್ಲಿ ಮುಖ್ಯವಾದ ಈ ಕೆಳಕಂಡ ಕಾರ್ಯಕ್ರಮಗಳ ಗುರಿ ಹೀಗಿದೆ.

1)	ಭೂ ಅಭಿವೃದ್ಧಿ ಕೆಲಸ	:	7498 ಹೆ.
2)	ಜಮೀನು ನೀರಾವರಿ ಕಾಲುವೆಗಳು	:	4315 ಹೆ.
3)	ವಾರಾಬಂದಿ	:	5816 ಹೆ.
4)	ಆಯಕಟ್ಟು ರಸ್ತೆಗಳು	:	4 ಕಿ.ಮಿ.
5)	ವಿಶೇಷ ಘಟಕ ಯೋಜನೆ	:	65 ಲಕ್ಷ ರೂ.ಗಳು

ಈ ಮೇಲ್ಕಂಡ ಕಾರ್ಯಕ್ರಮದಲ್ಲಿ ಡಿಸೆಂಬರ್ 93ರ ಅಂತ್ಯಕ್ಕೆ ಸಾಧಿಸಲಾಗಿರುವ ಪ್ರಗತಿ ಈ ರೀತಿ ಇದೆ.

		ಗುರಿ	ಸಾಧನೆ	ಶೇಕಡ
1)	ಭೂ ಅಭಿವೃದ್ಧಿ ಕೆಲಸ	6978 ಹೆ.	6508 ಹೆ.	93
2)	ಜಮೀನು ನೀರಾವರಿ ಕಾಲುವೆಗಳು	3299 ಹೆ.	3200 ಹೆ.	97
3)	ವಾರಾಬಂದಿ	4261 ಹೆ.	4614 ಹೆ.	108
4)	ಆಯಕಟ್ಟು ರಸ್ತೆಗಳು	4 ಕಿ.ಮಿ.	3 ಕಿ.ಮಿ	75
5)	ವಿಶೇಷ ಘಟಕ ಯೋಜನೆ			
	ಆರ್ಥಿಕ	ರೂ.56.60 ಲಕ್ಷರೂ.	61.56 ಲಕ್ಷ	109
	ಭೌತಿಕ	687 ಸಂಖ್ಯೆ	639 ಸಂಖ್ಯೆ	93

ಒಟ್ಟಿನಲ್ಲಿ ಸದರಿ ಕಾಡಾದಲ್ಲಿ ಡಿಸೆಂಬರ್ 93ರ ಅಂತ್ಯಕ್ಕೆ 389.20 ಲಕ್ಷ ರೂ.ಗಳ ಗುರಿ ಹೊಂದಿದ್ದು ಅದರಲ್ಲಿ 358.74 ಲಕ್ಷ ರೂ.ಗಳ ಪ್ರಗತಿಯನ್ನು ಸಾಧಿಸಿದೆ. ಅಂದರೆ ಶೇಕಡ 92 ಗುರಿ ಸಾಧಿಸಿದಂತಾಗಿದೆ.

ಸಿಬ್ಬಂದಿಗಾಗಿ 1993-94ಕ್ಕೆ 90.00 ಲಕ್ಷ ರೂ.ಗಳ ಅನುದಾನವಿದ್ದು ಡಿಸೆಂಬರ್ 93 ರ ಅಂತ್ಯಕ್ಕೆ 65.00 ಲಕ್ಷ ರೂ.ಗಳ ಗುರಿ ಹೊಂದಿದ್ದು ವೆಚ್ಚ ರೂ. 50.19 ಲಕ್ಷಗಳಾಗಿವೆ. ಅಂದರೆ ಒಟ್ಟು ವೆಚ್ಚವಾದ 358.74 ಲಕ್ಷಕ್ಕೆ ಹೋಲಿಸಿದಲ್ಲಿ ಸದರಿ ಕಾಡಾದ ಸಿಬ್ಬಂದಿ ವೆಚ್ಚ ಕೇವಲ ಶೇಕಡ 14 ಆಗುತ್ತದೆ. ಭೂ ಅಭಿವೃದ್ಧಿ ಕೆಲಸಕ್ಕೂ ತಗಲುವ ವೆಚ್ಚವನ್ನು ಸಿಬ್ಬಂದಿ ವೆಚ್ಚವೆಂದು ಪರಿಗಣಿಸಿದರೂ ಸಹಾ ಈ ಕಾರ್ಯದಲ್ಲಿ 146.17 ಲಕ್ಷ ರೂ.ಗಳು ವೆಚ್ಚವಾಗಿದ್ದು ಭೌತಿಕ ಸಾಧನೆ 6508 ಹೆ. (ಅಂದರೆ ಶೇಕಡ 93) ಆಗಿರುತ್ತದೆ.

ಆದುದರಿಂದ ಕಾಡಾ ನೌಕರರ ಪಗಾರ ಮತ್ತು ಆಫೀಸ್ ಸಿಬ್ಬಂದಿಗಾಗಿ ಮಾಡಿರುವ ಖರ್ಚು ಅತ್ಯಲ್ಪದ್ದಾಗಿರುತ್ತದೆ.

ವಿಶ್ವ ಆಹಾರ ಯೋಜನೆಯಡಿ 1993-94ನೇ ಸಾಲಿನಲ್ಲಿ 232.84 ಲಕ್ಷ ರೂಪಾಯಿ ಮೊತ್ತದ ಕೆಲಸ ಮಂಜೂರಾಗಿದ್ದು ಬೈಲ ಹೊಂಗಲ ಕ್ಷೇತ್ರದಲ್ಲಿಯೂ, ವಿವಿಧೋದ್ದೇಶ ಸಮುದಾಯ ಭವನಗಳು, ಬೈಲಹೊಂಗಲ, ಹೊಸೂರು ಕೆಂಗನೂರು ಹಾಗೂ ಬೇಗಿನಾಳ -ಬೇವಿನಕೊಪ್ಪ ರಸ್ತೆ ಸುಧಾರಣೆ ಕೆಲಸ ಇತ್ಯಾದಿ ಕಾಮಗಾರಿಗಳನ್ನು ತೆಗೆದುಕೊಂಡಿದ್ದು ಅವುಗಳು ಪ್ರಗತಿಯಲ್ಲಿವೆ.

+ ಶ್ರೀ ಶಿವಾನಂದ ಹೆಚ್. ಕೌಜಲಗಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಬೆಳಗಾಂ ಜಲ್ಲೆಯ ಮಲಪ್ರಭಾ ಕಾಡಾದಲ್ಲಿ ಎಲ್ಲ ರೀತಿಯಿಂದ ಪ್ರಗತಿಪಥ ರೀತಿಯಲ್ಲಿ ಕೆಲಸ ನಡೆಯುತ್ತಿದೆ ಎಂದು ಹೇಳಿದರು. ಅವರು ಹಾಕಿಕೊಂಡಂತಹ ಕಾರ್ಯಕ್ರಮವನ್ನು ನಾವು ನೋಡಿದಾಗ ತಮಗೂ ಸಹಿತ ತಿಳಿದುಬರುತ್ತದೆ. ತಮಗೊಂದು ಉದಾಹರಣೆಯನ್ನು ಹೇಳುವುದಾದರೆ, ಆಯಕಟ್ಟ ರಸ್ತೆಯನ್ನು 4 ಕಿಲೋಮೀಟರ್ ಹಾಕಿಕೊಳ್ಳುವುದು. ಅದರಲ್ಲಿ 3ಕಿಲೋಮೀಟರ್ ಮಾಡುವುದು, ಸೆಂಟ್ ಪರ್ಸೆಂಟ್ ರಿಸಲ್ಟ್ ಎಂದು ತೋರಿಸುವುದು. ಇವತ್ತಿನ ದಿವಸ ಆಯಕಟ್ಟಿನ ಪ್ರದೇಶಗಳಲ್ಲಿ 70 ಹಳ್ಳಿಗಳು ಬರುತ್ತವೆ. 70 ಹಳ್ಳಿಗಳು ಬಂದರೆ ಅವರು ಮಾಡತಕ್ಕ ಕೆಲಸ ಏನೆಂದರೆ 4 ಕಿಲೋಮೀಟರ್ ರಸ್ತೆ ಕೆಲಸ ಎಂದು ಸ್ಕೀಂ ಹಾಕಿಕೊಳ್ಳುವುದು, ಅದರಲ್ಲಿ 3 ಕಿಲೋಮೀಟರ್ ರಸ್ತೆ ಮಾಡುವುದು, ನಾವು ಸೆಂಟ್ ಪರ್ಸೆಂಟ್ ಮಾಡಿದ್ದೇವೆಂದು ಹೇಳುವುದು, ಇದು ಒಂದು. ಎರಡನೆಯದು 1993-94ನೇ ಸಾಲಿನಲ್ಲಿ ಇವತ್ತಿನವರೆಗೆ ವಿಶ್ವ ಆಹಾರ ಯೋಜನೆಯಲ್ಲಿ ತೆಗೆದುಕೊಳ್ಳಬೇಕಾದ ಕೆಲಸದ ಮೀಟಿಂಗ್ ಆಗಿಲ್ಲ. ಯಾವುದೇ ಕೆಲಸ ತೆಗೆದುಕೊಳ್ಳಬೇಕೆಂದು ತೀರ್ಮಾನ ಆಗಲಿಲ್ಲ. ತಾವು ಏನು ಕೊಟ್ಟಿದ್ದೀರಿ ಅಂದರೆ ಮೊದಲು ಆನ್ ಗೋಯಿಂಗ್ ವರ್ಕ್ಸ್ ಕೊಟ್ಟಿದ್ದೀರಿ. 1993-94ನೇ ಸಾಲಿನಲ್ಲಿ ಯಾವ ಕೆಲಸ ತೆಗೆದುಕೊಳ್ಳಬೇಕೆಂದು ಅಲ್ಲಿಯ ಅಧ್ಯಕ್ಷರು ಪ್ರತಿಯೊಬ್ಬರಿಗೂ ಲೆಟರ್ ಬರೆದಿದ್ದಾರೆ. ಶಾಸಕರು ಹೇಳಿದ 5 ಲಕ್ಷ ರೂಪಾಯಿ ಕೆಲಸ ತೆಗೆದುಕೊಳ್ಳಲಿಕ್ಕೆ ಖಿದ್ದಾಗಿ ಆಗಿ ಪತ್ರ ಬರೆದಿದ್ದಾರೆ. ಅಧ್ಯಕ್ಷರು ಸಹಿತ ಪತ್ರ ಬರೆದಿದ್ದಾರೆ. ಒಂದು ತಿಂಗಳ ಹಿಂದೆ ಪತ್ರ ಬರೆದಿದ್ದಾರೆ. ಅವರು ಪತ್ರ ಬರೆದು 11 ತಿಂಗಳಾಯಿತು. ಇವತ್ತಿನತನಕ ಅದು ಆಗಲಿಲ್ಲ. ಸುಮಾರು 2 ಕೋಟಿ ರೂಪಾಯಿ ಇವತ್ತಿನ ದಿವಸ ಹಣ ಹಾಗೆಯೇ ಇದೆಯೆಂದು ತಿಳಿದುಬರುತ್ತದೆ. ಅದೂ ಅಲ್ಲದೆ ಇವತ್ತಿನವರೆಗೆ ಕಾಡಾ ಅಡ್ಮಿನಿಸ್ಟ್ರೇಟರ್ ಒಂದು ಟೂರ್ ಪ್ರೋಗ್ರಾಮ್ ಅನ್ನು ಯಾವ ಎಂಎಲ್‌ಎಗಳಿಗೂ ಕಳುಹಿಸಿದ್ದು ಇಲ್ಲ. ಯಾರಿಗಾದರೂ ಕಳುಹಿಸಿದ್ದಾರೆಯೇ ಕೇಳಿ? ನಮ್ಮ ಕಾಡಾ ಅಭಿವೃದ್ಧಿ ಯೋಜನೆಯಲ್ಲಿ ಬರತಕ್ಕ ಯಾವುದೇ ಕೆಲಸವನ್ನು ಸರ್ವೆಸ್ ಇನ್ವೆಕ್ಷನ್ ಮಾಡಿದ್ದಾರೆಯೇ? ಒಬ್ಬರು ಡೆಪ್ಯುಟಿ ಸೆಕ್ರೆಟರಿ ಇದ್ದಾರೆ, ಒಬ್ಬರು ಅಧ್ಯಕ್ಷರು ಆಡಳಿತಾಧಿಕಾರಿಗಳು ಬೇಕಾದರೆ ಅವರ ಮನೆಯವರನ್ನು ಕೇಳಿಕೊಳ್. ಅದೂ ಅಲ್ಲದೆ ಡೆಪ್ಯುಟಿ ಅಡ್ಮಿನಿಸ್ಟ್ರೇಟರ್ ಅವರು ಉತ್ತರ ಹಿಂದೂಸ್ಥಾನದಲ್ಲಿ, ದೆಹಲಿಯಲ್ಲಿ ಟೂರ್ ಮಾಡುವುದಕ್ಕೆ ಹೊರಟಿದ್ದಾರೆ. ಅವರು ಅಲ್ಲಿ ಟೂರ್ ಮಾಡಿದ ನಂತರ ಇಲ್ಲಿ ನಮ್ಮ ಜನತೆಗೆ ಹೇಳುವುದು ಏನಿದೆ? ನಮ್ಮ ವಸ್ತುಸ್ಥಿತಿನೇ ಬೇರೆ ಇದೆ. ತಾವೇನು ಫಿಗರ್ಸ್ ಕೊಟ್ಟಿದ್ದೀರಿ, ಅದು

ನಿಜವಾಗಿಯೂ ಸರಿಯಾಗಿಲ್ಲ. ತಾವು ಪುನರ್ ಪರಿಶೀಲನೆ ಮಾಡಬೇಕು. ಅದರ ಬಗ್ಗೆ ತಾವೇ ಸ್ವತಃ ಒಂದು ರಿವ್ಯೂ ಮಾಡಿ. ಮತ್ತೊಬ್ಬರ ಮೇಲೆ ನನಗೆ ವಿಶ್ವಾಸವಿಲ್ಲ. ನಿಮ್ಮ ಮೇಲೆ ನನಗೆ ವಿಶ್ವಾಸವಿದೆ. ಆ ಡಿಪಾರ್ಟ್‌ಮೆಂಟ್ ಮೇಲೆ ತಾವು ರಿವ್ಯೂ ಮಾಡಿ. If you are satisfied that the Department is working satisfactorily, then I am happy ಇಲ್ಲದಿದ್ದರೆ ನೀವು ಸ್ವತಃ ನೋಡಿಕೊಳ್ಳಿ. ಇವತ್ತು ಆ ಆಫೀಸಿನಲ್ಲಿ ಮಾತ್ರ ಐನೂರು ಆರುನೂರು ಮಂದಿ ಕಾರಕೂನರು ಇದ್ದಾರೆ. ಅವರಿಗೆ ವರ್ಕ್ ಏನಿದೆ? ಅಲ್ಲಿ ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟ್ ಇದೆ, ಕೋ-ಆಪರೇಷನ್ ಡಿಪಾರ್ಟ್‌ಮೆಂಟ್ ಇದೆ, ಫೈನಾನ್ಸ್ ಡಿಪಾರ್ಟ್‌ಮೆಂಟ್ ಇದೆ, ಚೌಳುಭೂಮಿ ಡಿಪಾರ್ಟ್‌ಮೆಂಟ್ ಇದೆ. 37 ಹಳ್ಳಿಗಳು ಮುಳುಗಡೆಯಾಗಿರುವ ಕಡೆ ಏನು ಕೆಲಸ ಆಗುತ್ತಿದೆ? ತಾವು ಗಂಟೆ ಬಾರಿಸುತ್ತಾ ಇದ್ದೀರಿ?

ಅಧ್ಯಕ್ಷರು : ಮಾನ್ಯ ಸದಸ್ಯರು ಸಂಕ್ಷಿಪ್ತವಾಗಿ ಹೇಳಬೇಕು

ಶ್ರೀ ಶಿವಾನಂದ ಪಟ್ಟಣ್. ಕೌಜಲಗಿ : ಇದನ್ನು ಸಂಕ್ಷಿಪ್ತವಾಗಿ ಹೇಳುವುದಕ್ಕೆ ಹೇಗೆ ಸಾಧ್ಯ ಕೋಟಿಗಟ್ಟಲೆ ವ್ಯವಹಾರ ನಡೆದಿದೆ, ಸಂಕ್ಷಿಪ್ತವಾಗಿ ಹೇಳಿದರೆ ಹೇಗೆ ಗೊತ್ತಾಗುತ್ತದೆ? ತಾವೇ ಸ್ವತಃ ರಿವ್ಯೂ ಮಾಡಿ. ತಮಗೆ ಸರಿ ಅನಿಸುತ್ತದೆಯೇ ನೋಡಿ. ಒಂದು ಕೆಲಸ ಸಹ ಸರಿಯಾಗಿ ನಡೆದಿಲ್ಲ. ನನ್ನ ಮತದಾರ ಕ್ಷೇತ್ರದಲ್ಲಿ ಎರಡು ರಸ್ತೆಗಳು ಶುರುವಾಗಿವೆ. ಇಮತ್ತಿನ ತನಕ ಅವು ಪೂರ್ತಿಯಾಗಿಲ್ಲ. ನಾವು ಊರಿನ ಮಂದಿಗೆ ರೋಡ್ ಮಂಜೂರಿ ಆಗಿದೆ. ನೀವು ಕಾಳಜಿ ಮಾಡಬೇಡಿಯೆಂದು ಹೇಳುತ್ತೇವೆ. ಆದರೆ ಅಲ್ಲಿ ಯಾವುದೇ ಕೆಲಸ ನಡೆದಿಲ್ಲ. ಆದ್ದರಿಂದ ಅದರ ಬಗ್ಗೆ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ವಿಷಯಗಳು ಪರಿಶೀಲನೆಗೆ ಯೋಗ್ಯವಾಗಿವೆ. ರಸ್ತೆಗಳ ಗುರಿ ಇಟ್ಟುಕೊಂಡಿರುವುದು ಕಡಿಮೆ. ಉದಾಹರಣೆಗೆ 75ಹಳ್ಳಿಗಳ ರಸ್ತೆಯ ಗುರಿಯನ್ನು ಹೆಚ್ಚು ಇಟ್ಟುಕೊಳ್ಳಬೇಕಾಗಿತ್ತು. 1994-95ನೇ ಸಾಲಿಗೆ ಹೆಚ್ಚಿನ ಗುರಿಯನ್ನು ಇಟ್ಟುಕೊಳ್ಳುವುದಕ್ಕೆ ಸೂಕ್ತ ತಿಳುವಳಿಕೆಯನ್ನು ಕೊಡಲಾಗುವುದು. ಶಾಸಕರನ್ನು ಕರೆದು ಸಭೆಯನ್ನು ಮಾಡಿ, ಜಿಲ್ಲಾಮಂತ್ರಿಗಳನ್ನು ಕರೆದು ರಿವ್ಯೂ ಮಾಡುವುದಕ್ಕೆ ಈಗಾಗಲೇ ಸೂಚನೆಯನ್ನು ನಮ್ಮ ಇಲಾಖೆಯ ಮುಖಾಂತರ ಕೊಡುತ್ತಿದ್ದೇವೆ. ತಮ್ಮನ್ನು ಕರೆದು ರಿವ್ಯೂ ಮಾಡಿ ಮುಂದಿನ ವರ್ಷಗಳಲ್ಲಿ ಹೇಗೆ ಮಾಡಬೇಕೆಂದು ಪರಿಶೀಲನೆ ಮಾಡುತ್ತಾರೆ. ವಿಶ್ವ ಆಹಾರ ಯೋಜನೆಯ ಮೀಟಿಂಗ್ ಕರೆದಿಲ್ಲವೆಂದು ಹೇಳಿದ್ದಾರೆ. ಅದು ಪ್ರತ್ಯೇಕವಾದ ಪ್ರಶ್ನೆಯಿದೆ. ಅದಕ್ಕೆ ಉತ್ತರ ಕೊಡುತ್ತೇನೆ.

ಶ್ರೀ ಶಿವಾನಂದ ಪಟ್ಟಣ್. ಕೌಜಲಗಿ : ಈಗ ರೊಕ್ಕ ಬಿಡುಗಡೆ ಮಾಡಿದ್ದೀರಾ ಹೇಗೆ? ಕಡೆಗೆ ಎಲ್‌ಒಸಿ ಬಿಡುಗಡೆಯಾಗಿಲ್ಲ. ಬರೀ ದೊಡ್ಡ ಆಫೀಸ್ ಇದೆ. ಅಲ್ಲಿ ವಿಧಾನಸೌಧ ಇದ್ದ ಹಾಗೆ ಇದೆ. ರೊಕ್ಕನಾದರೂ ಬಿಡುಗಡೆ ಮಾಡ್ರಿ. ಅಲ್ಲಿರುವ ಸ್ಟ್ಯಾಫ್ ಕಡಿಮೆ ಮಾಡ್ರಿ. ನ್ಯಾಷನಲ್ ವೇಸ್ಟ್ ಮಾಡುವುದು ಬೇಡ. ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟ್, ಫೈನಾನ್ಷಿಪಾರ್ಟ್‌ಮೆಂಟ್, ಸೋಸಿಯಲ್ ವೆಲ್ಫೇರ್ ಡಿಪಾರ್ಟ್‌ಮೆಂಟ್ ಹೀಗೆ ತಲೆಗೊಂದು ಸ್ಟಾಫ್ ಇದೆ. ಸ್ಟ್ಯಾಫನ್ನು ಸುಮ್ಮನೆ ಕೂಡಿಸಿ ಪಗಾರ ಕೊಡುತ್ತಾ ಇದ್ದೀರಿ.

ಅಧ್ಯಕ್ಷರು : ಮಂತ್ರಿಗಳು ಪರಿಶೀಲನೆ ಮಾಡುತ್ತೇನೆಂದು ಹೇಳಿದ್ದಾರೆ.

(2) ಕ್ಲಾಸಿಕ್ ಕಂಪ್ಯೂಟರ್ ಪಗರಣ

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಸನ್ಮಾನ್ಯ ಅಧ್ಯಕ್ಷರೇ, ಸುಮಾರು ಎರಡು ವರ್ಷಗಳ ಹಿಂದೆ, ರಾಜಕೀಯ ವಲಯದಲ್ಲಿ ಒಂದು ದೊಡ್ಡ ಬಿರುಗಾಳಿ ಎಬ್ಬಿಸಿದಂಥ ಈ ಕ್ಲಾಸಿಕ್ ಕಂಪ್ಯೂಟರ್ ಪಗರಣದ ಬಗ್ಗೆ ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇನೆ. ದಿ 8-2-94ರಲ್ಲಿ ಎಲ್ಲಾ ಪತ್ರಿಕೆಗಳ ಮುಖಪುಟಗಳಲ್ಲಿ,